ಸಾಕ್ಷಿಯು ಕ್ರಮವಾಗಿ ಪ್ರಮಾಣಿಕರಿಸಿದ ದಿನಾಂಕಃ 19-01-2019

ಮುಂದುವರಿದ ಪಾಟಿ ಸವಾಲುಃ ಶ್ರೀ ಎನ್ ಸಿ ಸಿ ವಕೀಲರಿಂದ

ನಾನು ಖರೀದಿ ಮಾಡಿಕೊಂಡ ಕ್ರಯ ಪತ್ರದಲ್ಲಿ ನಾನು ಖರೀದಿ ಮಾಡಿದ ಜಾಗದ ವಿಸ್ತೀರ್ಣ 125 ಅಡಿ ಉದ್ದ 24 ಅಡಿ ಅಗಲ ಎಂದು ಬರೆದಿಲ್ಲ ಎಂದರೆ ಸರಿ . ನಾನು ಜಾಗವನ್ನು ಖರೀದಿ ಮಾಡಿದ ನಂತರವು ಸಹ ಸರ್ವೆ ಮಾಡಿಸಿಲ್ಲ. ನಾನು ಖರೀದಿ ಮಾಡಿರುವ ಸ್ಥಳದಲ್ಲಿ 254 ಮುಕ್ಕಾಲು ಚದರ ಮೀಟರ್ ನಷ್ಟು ವಿಸ್ತೀರ್ಣಾ ಇದೆ . ನನ್ನ ಕ್ರಯ ಪತ್ರದ ಪ್ರಕಾರ ನಾನು ಖರೀದಿ ಮಾಡಿದ ಆಸ್ತಿಯ ವಿಸ್ತೀರ್ಣಾ 81 ಚದರ ಮೀಟರ್ ಎಂದರೆ ಸರಿ . ಅಂದರೆ ಅದು 2 ಸೆಂಟ್ಸ್ ನಷ್ಟು ಜಾಗಕ್ಕೆ ಸಮ ಎಂದರೆ ಸರಿ . ಮೇಲಿನ ಕಾರಣಕ್ಕೆ ಕ್ರಯಪತ್ರದಲ್ಲಿ 81 ಚದರ ಮೀ ಎಂದು ಬರೆದಿಲ್ಲ 2 ಸೆಂಟ್ ಎಂದು ಬರೆಯಲಾಗಿದೆ ಎಂದರೆ ಸರಿ . ನಾನು ಖರೀದಿ ಮಾಡಿದ ಕಾಲಕ್ಕೆ ಬಿದರೂರು ಲೈನ್ ಸಿಟಿ ಸರ್ವೆ ಗೆ ಒಳಪಟ್ಟಿರಲಿಲ್ಲ ಎಂದರೆ ಸರಿ . ನಾನು ಖರೀದಿ ಮಾಡಿದ ನಂತರ ಶನಿವಾರಸಂತೆ ಹಾಗೂ ಬಿದರೂರು ಲೈನ್ ನಲ್ಲಿ ಸಿಟಿ ಸರ್ವೆ ಮಾಡಲಾಯಿತು ಎಂದರೆ ಸರಿ . ಮತ್ತು ಸಿಟಿ ಸರ್ವೆ ನಲ್ಲಿ ಸದರಿ ಪ್ರದೇಶಗಳ ಎಲ್ಲಾ ಆಸ್ತಿಗಳ ಹಿಡುವಳಿದಾರರಿಗೆ ತಮ್ಮ ಸ್ವಾಧೀನದಲ್ಲಿದ್ದ ಆಸ್ತಿಗಳಿಗೆ ಪ್ರಾಪರ್ಟಿ ಕಾರ್ಡ್ ನೀಡಲಾಯಿತು ಎಂದರೆ ಸರಿ .

ನಾನು ಖರೀದಿ ಮಾಡಿದ ಆಸ್ತಿಯ ಯಾವ ದಿಕ್ಕಿನಲ್ಲಿಯು ಸರಕಾರದ ಆಸ್ತಿಗಳು ಇಲ್ಲ ಎಂದರೆ ಸರಿ . ಮತ್ತು ಸದರಿ ಸಿಟಿ ಸರ್ವೆಯಲ್ಲಿ ನನಗೆ ಅಧಿಕಾರವಿಲ್ಲದ ಜಾಗದ 173.74 ಚದುರ ಮೀ ನಷ್ಟು ಹೆಚ್ಚಿನ ಜಾಗ ನನ್ನ ಸ್ವಾಧೀನದಲ್ಲಿರುವುದು ಕಂಡು ಬಂದಿತ್ತು ಎಂದರೆ ಸರಿ . ನನಗೆ ನೀಡಲಾದ ಪ್ರಾಪರ್ಟಿ ಕಾರ್ಡ್ ನಲ್ಲಿ ಸದರಿ ವಿಸ್ತೀರ್ಣವನ್ನು ಒತ್ತುವರಿ ವಿಸ್ತೀರ್ಣ ಎಂದು ತೋರಿಸಲಾಗಿದೆ ಎಂದರೆ ಸರಿ . ಹಾಗೇ ಒತ್ತುವರಿ ವಿಸ್ತೀರ್ಣ ಎಂದು ತೋರಿಸಿರುವ ಪ್ರದೇಶದ ಮೇಲೆ ನನಗೆ ಯಾವುದೇ ಹಕ್ಕು ಇಲ್ಲ ಎಂದರೆ ಸಾಕ್ಷಿಯು ಹಕ್ಕು ಇದೆ ಎನ್ನುವರು . ಮೇಲೆ ಹೇಳಿದ ಪ್ರದೇಶದ ಮೇಲೆ ಹಕ್ಕು ಉಂಟು ಎಂದು ಹೇಳಲು ಯಾವುದೇ ದಾಖಲೆ ಇಲ್ಲ. ಸದರಿ ಒತ್ತುವರಿ ಮಾಡಿರುವ ಜಾಗ ಮಂಜುನಾಥನವರಿಗೆ ಸೇರಿದ ಜಾಗ ಎಂದರೆ ಸರಿಯಲ್ಲ.

ಈ ಪ್ರಕರಣವು ದಾಖಲಾಗುವ ಮುಂಚೆ ವಕೀಲರಿಂದ ನನಗೆ ಒಂದು ನೋಟಿಸ್ ಬಂದಿತ್ತು ಎಂದರೆ ಸರಿ . ಈಗ ಸಾಕ್ಷಿಗೆ ನಿಪಿ 46 ನ್ನು ತೋರಿಸಿದ್ದು ಅದು ನನಗೆ ತಲುಪಿತ್ತು ಮತ್ತು ನಿಪಿ 47 ರ ಪ್ರಕಾರ ಸದರಿ ನೋಟಿಸ್ ನನಗೆ ಜಾರಿಯಾಗಿತ್ತು . ಸದರಿ ನೋಟಿಸ್ ಗೆ ನಾನು ನಮ್ಮ ವಕೀಲರಿಂದ ನಿಪಿ 51 ರ ಪ್ರಕಾರ ಉತ್ತರವನ್ನು ಸಹ ನೀಡಿದ್ದೆ ಎಂದರೆ ಸರಿ . ಸಿ ಟಿ ಎಸ್ ನಂ 351 ರ ಸುತ್ತಾಮುತ್ತಾ ಯಾವುದೇ ಸರಕಾರಿ ಆಸ್ತಿ ಇಲ್ಲ ನಾನು ಒತ್ತುವರಿ ಮಾಡಿಕೊಂಡಿರುವ ಆಸ್ತಿಯು ಮಂಜುನಾಥರವರಿಗೆ ಸೇರಿದ್ದು ಎಂದರೆ ಸರಿಯಲ್ಲ. ನನ್ನ ಆಸ್ತಿಗಳಿಗೆ ಅಂಟಿಕೊಂಡಂತೆ ಉತ್ತರ ಹಾಗೂ ಪಶ್ಚಿಮಕ್ಕೆ

ಮುಟ್ಟಿಕೊಂಡಂತೆ ವಾದಿಗೆ ಸೇರಿದ ಆಸ್ತಿಗಳಿವೆ . ಸದರಿ ಮಂಜುನಾಥರವರಿಗೆ ಸೇರಿದ ಆಸ್ತಿಗಳು ಮನೆ ದಳ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ.

ನಿಪಿ 6 ರಲ್ಲಿ ತೋರಿಸಲಾಗಿರುವ 77/1 ಬಿ ಕಂದಾಯ ಇಲಾಖೆಯ ಸರ್ವೆ ನಂಬರ್ ಎಂದರೆ ಸರಿ . ಮಂಜುನಾಥರವರಿಗೆ ಸೇರಿರುವ ಸರ್ವೆ ನಂ 77/13 ಎ , 77/13 ಪಿ 1 ಮತ್ತು 77/15 ಇವುಗಳು ಅವರಿಗೆ ಸೇರಿದೆ ಎಂದರೆ ಸಾಕ್ಷಿಯು ಗೊತ್ತಿಲ್ಲ ಎನ್ನುವರು . ಸದರಿ ಸರ್ವೆ ನಂ ಗಳಲ್ಲಿ ಸದರಿ ಮಂಜುನಾಥರವರಿಗೆ ಒಟ್ಟಾಗಿ 30 ಸೆಂಟ್ ಜಾಗವಿದೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುವರು . ನಾನು ಒತ್ತುವರಿ ಮಾಡಿಕೊಂಡು ಸ್ವಾಧೀನ ಹೊಂದಿರುವ 2 ಸೆಂಟ್‌ನಷ್ಟು ಜಾಗ ಮಂಜುನಾಥರವರಿಗೆ ಸೇರಿದ್ದು ಎಂದರೆ ಸರಿಯಲ್ಲ. ಮಂಜುನಾಥರವರಿಗೆ ಅವರ ಒಟ್ಟು ಆಸ್ತಿಗಳಿಗೆ ಸೇರಿ ಸಿ ಟಿ ಎಸ್ ನಂ 350 ಎಂದು ನೀಡಲಾಗಿದೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎನ್ನುವರು. ಪ್ರಸ್ತುತ ಮಂಜನಾಥರವರ ಬಳಿ 1036.916 ಚದರ ಮೀಟರ್ ಮಾತ್ರ ಸ್ವಾಧೀನದಲ್ಲಿದೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎನ್ನುವರು . ನಾನು 2 ಸೆಂಟ್ ನಷ್ಟು ಜಾಗವನ್ನು , ಮಾದಪ್ಪನವರು ಸಹ 2 ಸೆಂಟ್ ನಷ್ಟು ಜಾಗ ಹಾಗೂ ಲೀಲಾಧರ್ ರವರು ಅರ್ಧ ಸೆಂಟ್‌ನಷ್ಟು ಜಾಗವನ್ನು ಒತ್ತುವರಿ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ. ಮೇಲಿನ ಒತ್ತುವರಿ ವಿಚಾರ ತಿಳಿದಿದ್ದರು ಸಹ ಮಂಜುನಾಥರವರಿಗೆ ಒತ್ತುವರಿ ಜಾಗ ಬಿಟ್ಟು ಕೊಡಬೇಕೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಸದರಿ ಸಿಟಿ ಸರ್ವೆ ಮಾಡಿದಾಗ ಅತಿ ಕ್ರಮಣ ಎಂದು ಕಂ ಡು ಬಂದ ಜಾಗವನ್ನು ಸರಕಾರದ ಜಾಗ ಎಂದು ಬರೆದಿದ್ದಾರೆ ಎಂದರೆ ಸಾಕ್ಷಿಯು ಬೇರೆಯವರದು ಬರೆದಿರುವುದು ಗೊತ್ತಿಲ್ಲ ಆದರೆ ನನ್ನ ಜಾಗವನ್ನು ಬರೆದಿದ್ದಾರೆ ಎನ್ನುವರು . ಮತ್ತು ಸದರಿ ಒತ್ತುವರಿ ಜಾಗವನ್ನು ಕಂಡು ಹಿಡಿಯುವ ವಿಚಾರವು ಅವರ ಪರಿಮಿತಿಗೆ ಒಳಪಡದೆ ಇರುವುದರಿಂದ ಅದು ಸರಕಾರದ ಜಾಗ ಎಂದು ಬರೆದಿದ್ದಾರೆ ಎಂದರೆ ಸರಿ . ಮಂಜುನಾಥರವರಿಗೆ ಸೇರಿದ ದಾವಾ ಎ ಶೆಡ್ಯೂಲ್ ನ ಮೇಲೆ ನನಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿ . ಒತ್ತುವರಿ ಪ್ರದೇಶವನ್ನು ಬಿಟ್ಟು ಕೊಡಬೇಕೆಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟಿ ಸವಾಲು ಮುಕ್ತಾಯವಾಯಿತು .
(ನನ್ನ ಉಕ್ತಲೇಕನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.)

ಓದಿ ಹೇ ಕೇ ಸರಿ ಇದೆ

Sd/-

ಪ್ರ ದ ನ್ಯಾ ದಂ., ಸೋಮವಾರಪೇಟೆ.